**ST ALOYSIUS**

ESTD : 1880

(DEEMED TO BE **UNIVERSITY**)

**MANGALURU, KARNATAKA 575003 - INDIA**

# NEWS CLIPPINGS

## Visit of the Honorable Governor of Karnataka, Sri Thawar Chand Gehlot, to St Aloysius University

*Udayavani 14-01-2026*

### ಜ.16: ಅಲೋಶಿಯಸ್ ತಾಂತ್ರಿಕ, ಕಾನೂನು ಸ್ಕೂಲ್ ಉದ್ಘಾಟನೆ

**ಮಹಾನಗರ, ಜ. 13:** ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿ.ವಿ. ಸ್ಕೂಲ್ ಆಫ್ ಎಂಜಿನಿಯರಿಂಗ್ ಮತ್ತು ಸ್ಕೂಲ್ ಆಫ್ ಲಾ ಉದ್ಘಾಟನೆಯನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಂದ ಜ. 16ರಂದು ಬೆಳಗ್ಗೆ 11 ಗಂಟೆಗೆ ನೆರವೇರಿಸಲಿದ್ದಾರೆ.

ಅತಿಥಿಯಾಗಿ ಸಂಸದ ಕ್ಯಾ| ಬ್ರಿಜೇಶ್ ಚೌಟ ಭಾಗವಹಿಸಲಿದ್ದಾರೆ. ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ವಂ| ಮೆಲ್ವಿನ್ ಜೆ. ಪಿಂಟೊ, ವಿ.ವಿ. ಉಪಕುಲಪತಿ ವಂ| ಡಾ| ಪ್ರವೀಣ್ ಮಾರ್ಟಿಸ್ ಮತ್ತು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ| ರೊನಾಲ್ಡ್ ನಜರೆತ್ ಉಪಸ್ಥಿತರಿರುತ್ತಾರೆ.

*Varthabharathi 14-01-2026*

### ಜ.16ರಂದು ಅಲೋಶಿಯಸ್ ಇಂಜಿನಿಯರಿಂಗ್, ಕಾನೂನು ಶಾಲೆ ಉದ್ಘಾಟನೆ

ಮಂಗಳೂರು, ಜ.13: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ಮತ್ತು ಕಾನೂನು ಶಾಲೆಯ ಉದ್ಘಾಟನೆ ಜ.16ರಂದು ನಡೆಯಲಿದೆ.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪೂ. 11ಕ್ಕೆ ಉದ್ಘಾಟನೆ ನೆರವೇರಿಸಲಿದ್ದು, ಸಂಸದ ಕ್ಯಾ.ಬ್ರಿಜೇಶ್ ಚೌಟ ಅಧ್ಯಕ್ಷತೆ ವಹಿಸಲಿದ್ದಾರೆ.

ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ರೆ. ಫಾ.ಮೆಲ್ವಿನ್ ಜೆ ಪಿಂಟೊ, ವಿಶ್ವವಿದ್ಯಾಲಯದ ಉಪಕುಲಪತಿ ರೆ.ಡಾ.ಪ್ರವೀಣ್ ಮಾರ್ಟಿಸ್ ಮತ್ತು ವಿವಿಯ ರಿಜಿಸ್ಟ್ರಾರ್ ಡಾ.ರೊನಾಲ್ಡ್ ನಝರೆತ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಪ್ರಕಟನೆ ತಿಳಿಸಿದೆ.

*Times of India 14-01-2026*

# St Aloysius will introduce new schools on Jan 16

**Mangaluru:** St Aloysius (Deemed to be University), Mangaluru, will launch the school of engineering and the school of law on Jan 16.

Governor Thaawar Chand Gehlot, will inaugurate, and MP Capt Brijesh Chowta will be the guest of honour. According to university officials, the launch of the school of engineering and the school of law reflects the university's vision to respond to contemporary educational needs by nurturing ethical professionals, innovative thinkers, and socially conscious leaders. These new schools aim to blend strong academic foundations with research and industry collaboration. TNN

*Vijayakarnataka 14-01-2026*

# ರಾಜ್ಯಪಾಲರು 16ರಂದು ಜಿಲ್ಲೆಗೆ

**ಮಂಗಳೂರು:** ರಾಜ್ಯಪಾಲ ಥ್ಯಾವರ್ ಚಂದ್ ಗೆಹ್ಲೋಟ್ ಜ.16 ರಂದು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆ. ಬೆಳಗ್ಗೆ 9.35ಕ್ಕೆ ಸರ್ಕ್ಯೂಟ್ ಹೌಸ್, 11ಕ್ಕೆ ನಗರದ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಸ್ಕೂಲ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಸ್ಕೂಲ್ ಆಫ್ ಲಾ ಆಫ್ ಸೈಂಟ್ ಅಲೋಶಿಯಸ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

*Hosadigantha 14-01-2026*

# ಜ.16ರಂದು ರಾಜ್ಯಪಾಲರು ದಕ್ಷಿಣ ಕನ್ನಡ ಜಿಲ್ಲೆಗೆ

**ಮಂಗಳೂರು:** ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಜ. 16 ರಂದು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆ. ಅಂದು ಬೆಳಗ್ಗೆ 9.05ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮನ, 9.35ಕ್ಕೆ ಸರ್ಕ್ಯೂಟ್ ಹೌಸ್, 11 ಗಂಟೆಗೆ ನಗರದ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಸ್ಕೂಲ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಸ್ಕೂಲ್ ಆಫ್ ಲಾ ಆಫ್ ಸೈಂಟ್ ಅಲೋಶಿಯಸ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 2.15ಕ್ಕೆ ರಾಜ್ಯಪಾಲರು ಮಂಗಳೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

*Udayavani 14-01-2026*

## ಜ.16: ಜಿಲ್ಲೆಗೆ ರಾಜ್ಯಪಾಲರು



ಮಂಗಳೂರು, ಜ.13: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಜ.16ರಂದು ದ. ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆ.

ಜ. 16ರ ಬೆಳಗ್ಗೆ 9.05ಕ್ಕೆ ವಿಮಾನ ನಿಲ್ದಾಣಕ್ಕೆ ಆಗಮನ, 9.35ಕ್ಕೆ ಸರ್ಕ್ಯೂಟ್ ಹೌಸ್, 11ಕ್ಕೆ ನಗರದ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಸ್ಕೂಲ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಸ್ಕೂಲ್ ಆಫ್ ಲಾ ಆಫ್ ಸಂತ ಅಲೋಶಿಯಸ್ ಉದ್ಘಾಟನ ಕಾರ್ಯಕ್ರಮ, ಮಧ್ಯಾಹ್ನ 2.15ಕ್ಕೆ ಬೆಂಗಳೂರಿಗೆ ತೆರಳಲಿದ್ದಾರೆ ಎಂದು ಪ್ರಕಟನೆ ತಿಳಿಸಿದೆ.

*Deccan Herald 14-01-2026*

## Governor to visit M'luru on Jan 16

**MANGALURU, DHNS:** Governor Thaawarchand Gehlot will inaugurate the School of Engineering and School of Law on the campus of the St Aloysius Deemed-to-be-University on January 16.

According to a press release by Dakshina Kannada MP Captain Brijesh Chowta, St Aloysius Institutions Rector Fr Melwin J Pinto, St Aloysius Deemed-to-be-University Vice Chancellor Dr Praveenn Martis and University Registrar Ronald Nazareth, among others, will be present.

*Kannadaprabha 14-01-2026*

## 16ರಂದು ರಾಜ್ಯಪಾಲರು ದ.ಕನ್ನಡಕ್ಕೆ

**ಮಂಗಳೂರು:** ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ 16ರಂದು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಲಿದ್ದಾರೆ. ಅ ಬೆಳಗ್ಗೆ 9:35- ಸರ್ಕ್ಯೂಟ್ ಹೌಸ್, 11- ನಗರದ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಸ್ಕೂಲ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಸ್ಕೂಲ್ ಆಫ್ ಲಾ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು.

*Varthabharathi 14-01-2026*

## ಜ.16ರಂದು ರಾಜ್ಯಪಾಲ ಮಂಗಳೂರಿಗೆ

ಮಂಗಳೂರು, ಜ.13: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಜ.16ರಂದು ಮಂಗಳೂರಿಗೆ ಆಗಮಿಸಲಿದ್ದಾರೆ.

ಬೆಳಗ್ಗೆ 9:05ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸುವ ರಾಜ್ಯಪಾಲರು, 9:35ಕ್ಕೆ ಸರ್ಕ್ಯೂಟ್ ಹೌಸ್‌ಗೆ ಆಗಮಿಸುವರು. ಪೂ.11ಕ್ಕೆ ನಗರದ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಸ್ಕೂಲ್ ಆಫ್ ಇಂಜಿನಿಯರಿಂಗ್ ಆಂಡ್ ಸ್ಕೂಲ್ ಆಫ್ ಲಾ ಆಫ್ ಸೈಂಟ್ ಅಲೋಶಿಯಸ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವರು, ಅಪರಾಹ್ನ 2:15ಕ್ಕೆ ಮಂಗಳೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ ಎಂದು ಪ್ರಕಟನೆ ತಿಳಿಸಿದೆ.

*Vijayavani 14-01-2026*

## ನಾಡಿದ್ದು ಮಂಗಳೂರಿಗೆ ರಾಜ್ಯಪಾಲರ ಭೇಟಿ

**ಮಂಗಳೂರು:** ರಾಜ್ಯಪಾಲ ಥಾವರಚಂದ್ ಗೆಹಲೋತ್ ಜ.16ರಂದು ಮಂಗಳೂರಿಗೆ ಆಗಮಿಸಲಿದ್ದಾರೆ. ಬೆಳಗ್ಗೆ 11ಕ್ಕೆ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಸ್ಕೂಲ್ ಆಫ್ ಇಂಜಿನಿಯರಿಂಗ್ ಮತ್ತು ಸ್ಕೂಲ್ ಆಫ್ ಲಾ ಆಫ್ ಸೇಂಟ್ ಅಲೋಶಿಯಸ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.



**ನ್ಯಾಯಾಲಯ ಸಂಕೀರ್ಣ ಉದ್ಘಾಟನೆ:** ಪುತ್ತೂರು ಬನ್ನೂರಿನ ಆನೆಮಜಲುವಿನಲ್ಲಿ ನಿರ್ಮಾಣವಾದ ನ್ಯಾಯಾಲಯ ಸಂಕೀರ್ಣ ಜ.31ರಂದು ಉದ್ಘಾಟನೆಗೊಳ್ಳಲಿದೆ. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಿಎಂ ಸಿದ್ದರಾಮಯ್ಯ ಭಾಗವಹಿಸುವರು.

ಮಂಗಳೂರಿನ ಶೈಕ್ಷಣಿಕ ಕ್ರಾಂತಿಯ ಹೊಸ ಮೈಲಿಗಲ್ಲು:

# ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದಲ್ಲಿ ಎಂಜಿನಿಯರಿಂಗ್ ಮತ್ತು ಕಾನೂನು ಶಾಲೆಗಳ ಉದ್ಘಾಟನೆ





ಉದ್ಘಾಟನಾ ಸಮಾರಂಭ











## ನೂತನವಾಗಿ ಆರಂಭಗೊಂಡಿರುವ ವೃತ್ತಿಪರ ಕೋರ್ಸ್‌ಗಳ ವಿವರ

**ಕಾನೂನು ಶಾಲೆ (SCHOOL OF LAW)**

- **L.L.B. (Hons) - Legislative Law (3 Years):**
- **B.B.A. L.L.B. (Hons) - Business Administration & Legislative Law (5 Years):**

**ಎಂಜಿನಿಯರಿಂಗ್ ಶಾಲೆ (SCHOOL OF ENGINEERING)**

- **B.Tech. (Computer Science and Engineering):**
- **B.Tech. (CSE - AI & ML):**
- **B.Tech. (Electronics and Communication Engineering):**
- **B.Tech. (Information Science and Engineering):**





ಕಾನೂನು ಶಾಲೆ ಎಂಜಿನಿಯರಿಂಗ್ ಶಾಲೆ

ST ALOYSIUS (DEEMED TO BE UNIVERSITY)
Mangaluru 575003 - India
Contact: +91824 4117701 / 79752 77782
Email: info@staloysius.edu.in / admissions@staloysius.edu.in

With Best Compliments From: A Well Wisher, Mangaluru

*Samyuktha Karnataka 17-01-2026*

# ವಿದ್ಯಾರ್ಥಿಗಳು ವಿಧೇಯತೆ ಮೈಗೂಡಿಸಿಕೊಳ್ಳಿ: ರಾಜ್ಯಪಾಲರು

**ಸಂ.ಕ.ಸಮಾಚಾರ, ಮಂಗಳೂರು**

ವಿದ್ಯಾರ್ಥಿಗಳಲ್ಲಿ ಜ್ಞಾನದ ಹಂಬಲ, ಶೈಕ್ಷಣಿಕ ಸಾಧನೆಯ ಜತೆಗೆ ವಿಧೇಯತೆಯನ್ನು ಮೈಗೂಡಿಸಿಕೊಳ್ಳಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಕರೆ ನೀಡಿದ್ದಾರೆ.

ನಗರದ ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಇಂಜಿನಿಯರಿಂಗ್ ಹಾಗೂ ಕಾನೂನು ಪದವಿ ಕೋರ್ಸ್‌ಗಳಿಗೆ ಅವರು ಶುಕ್ರವಾರ ಚಾಲನೆ ನೀಡಿದರು.

ಕಾನೂನು ಶಿಕ್ಷಣವು ಸಾಮಾಜಿಕ ನ್ಯಾಯ, ಸಂವಿಧಾನ ರಕ್ಷಣೆ, ಮಾನವ ಹಕ್ಕು ರಕ್ಷಣೆಯ ಬಗ್ಗೆ ಅರಿವು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕಾನೂನು ವಿದ್ಯಾರ್ಥಿಗಳು ಈ ಜ್ಞಾನವನ್ನು ಪಡೆದು ಸಂವಿಧಾನ ರಕ್ಷಕರಾಗಬೇಕು. ಪ್ರಧಾನಿಯವರ ಡಿಜಿಟಲ್ ಇಂಡಿಯಾ, ಆತ್ಮ ನಿರ್ಭರ ಭಾರತ, ಸ್ಟಾರ್ಟ್ ಅಪ್‌ಗಳ ಸ್ಥಾಪನೆಗೆ ಇಂಜಿನಿಯರಿಂಗ್ ಪದವೀಧರರು ಕೊಡುಗೆ ನೀಡಬೇಕು ಎಂದು ಹೇಳಿದರು.

ಹಿಂದೆ ನಲಂದಾ, ತಕ್ಷಶಿಲಾ ವಿಶ್ವವಿದ್ಯಾನಿಲಯಗಳು ಜ್ಞಾನದ ದಾಹ ತಣಿಸುವ ಜೊತೆಗೆ ಭಾರತೀಯ ಸಂಸ್ಕೃತಿಯನ್ನು ಧಾರೆಯೆರೆಯುತ್ತಿದ್ದವು. ವಿದೇಶಿ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಇಲ್ಲಿಗೆ ಬರುತ್ತಿದ್ದರು. ಈ ಪರಂಪರೆಯ ಪುನರುತ್ಥಾನ ಆಗಬೇಕು ಎಂದು ಹೇಳಿದ ಅವರು, ಸೇಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆಯು ಶೈಕ್ಷಣಿಕ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದು, ಗುಣಮಟ್ಟದ ಶಿಕ್ಷಣ ನೀಡುತ್ತಿದೆ ಎಂದು ಶ್ಲಾಘಿಸಿದರು. ಸಂಸದ ಕ್ಯಾ. ಬ್ರಿಜೇಶ್ ಚೌಟ ಮಾತನಾಡಿ, ಶೈಕ್ಷಣಿಕ ಕ್ಷೇತ್ರದಲ್ಲಿ ಅಲೋಶಿಯಸ್ ಶಿಕ್ಷಣ ಸಂಸ್ಥೆಯ ಕೊಡುಗೆ ದೊಡ್ಡದು. ಮಂಗಳೂರು 2.0 ಬಗ್ಗೆ ಯೋಚಿಸಬೇಕಾಗಿದ್ದು, ಸ್ಥಳೀಯ ಅಭಿವೃದ್ಧಿ ಜೊತೆಗೆ ಸ್ಥಳೀಯ ವಾಗಿ ಉದ್ಯೋಗ ಸೃಷ್ಟಿಸಿ. ಈ ನೆಲವನ್ನು ಇನ್ನಷ್ಟು ಸಮೃದ್ಧಗೊಳಿಸಬೇಕಾಗಿದೆ ಎಂದರು.

ಶಿಕ್ಷಣ ಸಂಸ್ಥೆಯ ರೆಕ್ಟರ್ ಫಾ.ಮೆಲ್ವಿನ್ ಪಿಂಟೊ, ವಿವಿ ಕುಲಪತಿ ಫಾ.ಪ್ರವೀಣ್ ಮಾರ್ಟಿಸ್, ರಿಜಿಸ್ಟ್ರಾರ್ ರೊನಾಲ್ಡ್ ನಝರೆತ್, ಕಾನೂನು ಕಾಲೇಜಿನ ಡೀನ್ ಉದಯ್ ಕೃಷ್ಣ, ಇಂಜಿನಿಯರಿಂಗ್ ಕಾಲೇಜಿನ ಡೀನ್ ರುಬೇನ್ ಎಸ್. ಉಪಸ್ಥಿತರಿದ್ದರು.




*Rajasthan Patrika 17-01-2026*

# शिक्षा का उद्देश्य केवल व्यक्तिगत सफलता तक सीमित नहीं

**पत्रिका न्यूज नेटवर्क**
patrika.com

बेंगलूरु. शिक्षा का उद्देश्य केवल व्यक्तिगत सफलता तक सीमित नहीं होना चाहिए, बल्कि समाज और राष्ट्र की प्रगति में भी सक्रिय योगदान देना चाहिए। यह बातें राज्यपाल थावरचंद गहलोत ने शुक्रवार को मेंगलूरु स्थित सेंट एलॉयसियस (डीम्ड टू बी यूनिवर्सिटी) में स्कूल ऑफ इंजीनियरिंग और स्कूल ऑफ लॉ का उद्घाटन करते हुए कही। इस अवसर पर उन्होंने छात्रों से जिज्ञासा, परिश्रम और ईमानदारी को जीवन का मूल मंत्र बनाने का आह्वान किया। उन्होंने स्वामी विवेकानंद के विचारों का उल्लेख करते हुए कहा कि सच्ची शिक्षा वही है जो व्यक्तित्व का निर्माण करे, मन मजबूत बनाए, बुद्धि विकास करे और आत्मनिर्भर बनाए। भारत प्राचीन काल में विश्वगुरु के रूप में जाना जाता था, जहां नालंदा, तक्षशिला और विक्रमशिला जैसे विश्वविख्यात शिक्षा केंद्र मौजूद थे। भारत को फिर से वैश्विक ज्ञान शक्ति बनाने के लिए युवाओं की प्रतिभा, कौशल और ऊर्जा का सही दिशा में उपयोग जरूरी है।



कार्यक्रम में प्रतिभागी को सम्मानित करते राज्यपाल व अन्य अतिथि।

## ...बढ़ती है नवाचार क्षमता

**इंजीनियरिंग शिक्षा** पर बोलते हुए राज्यपाल ने कहा कि यह केवल तकनीकी ज्ञान तक सीमित नहीं है, बल्कि नवाचार, समस्या समाधान और रचनात्मक सोच को भी बढ़ावा देती है। वहीं, स्कूल ऑफ लॉ को उन्होंने संविधान, न्याय और लोकतांत्रिक मूल्यों को मजबूत करने की दिशा में एक महत्वपूर्ण पहल बताया। कार्यक्रम में सांसद कैप्टन ब्रिजेश चौटा, विवि के प्रो-चांसलर फादर मेल्विन पिंटो, कुलपति डॉ. प्रवीण मार्टिस, कुलसचिव डॉ. रोनाल्ड एन. आदि उपस्थित रहे।

Deccan Herald 17-01-2026



Governor Thaawarchand Gehlot visits St Aloysius Chapel after inaugurating School of Engineering and the School of Law at St Aloysius Deemed-to-be University in Mangaluru on Friday. DH PHOTO/FAKRUDDIN H

# Students should imbibe hard work, discipline, advises Governor

**MANGALURU, DHNS:** Governor Thaawarchand Gehlot on Friday inaugurated School of Engineering and the School of Law at St Aloysius Deemed-to-be University in Mangaluru on Friday.

Addressing the students, he said that along with academic achievement, they must imbibe hard work, integrity and discipline. Students should have a thirst for knowledge, and the knowledge acquired during student life should be utilised for the welfare and progress of the nation.

In the past, universities such as Nalanda and Takshashila not only quenched the thirst for knowledge, but also spread Indian culture. Foreign students came here for education, and this tradition needs to be revived. Education should provide a strong foundation for mental development and personality building, as Swami Vivekananda had said.

He lauded St Aloysius deemed to be University for its significant contribution to the field of education and for providing quality education.

He said legal education plays an important role in creating awareness about social justice, protection of the Constitution and human rights. Law students should acquire this knowledge and become guardians of the Constitution. Engineering graduates, he added, should contribute to initiatives such as Digital India, Atmanirbhar Bharat and the establishment of startups.

Dakshina Kannada MP Capt Brijesh Chowta said the contribution of St Aloysius educational institutions to the academic field is immense. He said there is a need to think about "Mangaluru 2.0" and to further enrich the region by generating local employment along with local development.

St Aloysius institutions Rector Rev Fr Melvin Pinto, Vice-Chancellor Fr Dr Praveen Martis, Registrar Ronald Nazareth, Dean of the Law College Dr Udaykrishna B and Dean of the Engineering College Ruban S were present.

The Governor also visited St Aloysius Chapel renowned for its intricate frescoes and paintings by Italian Jesuit artist Antonio Moscheni on the occasion.

Udayavani 17-01-2026

# ಅಲೋಶಿಯಸ್ ಶಿಕ್ಷಣ ಸಂಸ್ಥೆಯಿಂದ ಶೈಕ್ಷಣಿಕ ಕ್ರಾಂತಿ

## ಸ್ಕೂಲ್ ಆಫ್ ಎಂಜಿನಿಯರಿಂಗ್, ಸ್ಕೂಲ್ ಆಫ್ ಲಾ ವಿಭಾಗ ಉದ್ಘಾಟಿಸಿ ರಾಜ್ಯಪಾಲ ಗೆಹ್ಲೋಟ್



ಮಂಗಳೂರು, ಜ.16: ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದಲ್ಲಿ ನೂತನವಾಗಿ ಆರಂಭಿಸಲಾಗಿರುವ ಸ್ಕೂಲ್ ಆಫ್ ಎಂಜಿನಿಯರಿಂಗ್ ಮತ್ತು ಸ್ಕೂಲ್ ಆಫ್ ಲಾ ವಿಭಾಗಗಳ ಉದ್ಘಾಟನೆಯನ್ನು ಶುಕ್ರವಾರ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ನೆರವೇರಿಸಿದರು.

ಆ ಬಳಿಕ ಅವರು ಮಾತನಾಡಿ, ಸಮಾಜದ ಬೆಳವಣಿಗೆಯಲ್ಲಿ ಶಿಕ್ಷಣದ ಪಾತ್ರ ಮಹತ್ವವಾಗಿದ್ದು, ವಿದ್ಯಾರ್ಥಿಗಳು ನೈತಿಕ ಮೌಲ್ಯ, ಬದ್ಧತೆಯಿಂದ ಕೆಲಸ ನಿರ್ವಹಿಸಬೇಕು. ಈ ಮೂಲಕ ವಿದ್ಯಾರ್ಥಿದೆಸೆಯಲ್ಲಿ ಪಡೆದ ಜ್ಞಾನ ದೇಶದ ಶ್ರೇಯೋಭಿವೃದ್ಧಿಗೆ ವಿನಿಯೋಗವಾಗಬೇಕು ಎಂದರು.

ಡಿಜಿಟಲ್ ಇಂಡಿಯಾ, ಆತ್ಮನಿರ್ಭರ ಭಾರತ, ಸ್ಮಾರ್ಟ್‌ಸಿಟಿ, ಸ್ಟಾರ್ಟ್‌ಅಪ್ ವ್ಯವಸ್ಥೆಯಲ್ಲಿ ಎಂಜಿನಿಯರ್‌ಗಳ ಪಾತ್ರ ಮಹತ್ವವಾಗಿದ್ದು, ಕಾನೂನು ಶಿಕ್ಷಣವು ನ್ಯಾಯ, ಸಂವಿಧಾನ, ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿಹಿಡಿಯುವ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತದೆ ಎಂದರು.

ಸಂಸದ ಕ್ಯಾ| ಬ್ರಿಜೇಶ್ ಚೌಟ ಮಾತನಾಡಿದರು. ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ರೆಕ್ಟರ್ ವಂ| ಮೆಲ್ವಿನ್ ಜೆ. ಪಿಂಟೋ ಅಧ್ಯಕ್ಷತೆ ವಹಿಸಿದ್ದರು. ವಿ.ವಿ. ಕುಲಪತಿ ವಂ| ಪ್ರವೀಣ್ ಮಾರ್ಟಿಸ್, ರಿಜಿಸ್ಟ್ರಾರ್ ಡಾ| ರೊನಾಲ್ಡ್ ನಜರೆತ್, ಕಾನೂನು ಸ್ಕೂಲ್ ನ ಡೀನ್ ಉದಯಕೃಷ್ಣ, ಎಂಜಿನಿಯರಿಂಗ್ ಸ್ಕೂಲ್ ನ ಡೀನ್ ರುಬೇನ್ ಎಸ್., ಪ್ರಶಾಂತ್ ಸಿಕ್ವೇರ ಇದ್ದರು.

ಭರತನಾಟ್ಯದಲ್ಲಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್ ಸಾಧನೆಗೈದ ರೆಮೋನಾ ಇವೆಟ್ ಪಿರೇರಾ ಅವರನ್ನು ರಾಜ್ಯಪಾಲರು ಗೌರವಿಸಿದರು. ರಾಜ್ಯಪಾಲರನ್ನು ಸಂಸ್ಥೆಯ ವತಿಯಿಂದ ಸಮ್ಮಾನಿಸಲಾಯಿತು.

### ಆರಂಭವಾಗಿರುವ ನೂತನ ಕೋರ್ಸ್ – ಸ್ಕೂಲ್ ಆಫ್ ಲಾ

ಶಾಸಕಾಂಗ ಮೌಲ್ಯಗಳನ್ನು ಮತ್ತು ನ್ಯಾಯಾಂಗದ ನೈತಿಕತೆಯನ್ನು ಬೆಳೆಸಲು ಈ ಕೆಳಗಿನ ಕೋರ್ಸ್ ಆರಂಭಿಸಲಾಗಿದೆ

- ಎಲ್.ಎಲ್.ಬಿ. (ಹಾನ್ಸ್)-ಲೆಜಿಸ್ಲೇಟಿವ್ ಲಾ (3 ವರ್ಷ): ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ
- ಬಿಬಿಎ ಎಲ್.ಎಲ್.ಬಿ. (ಹಾನ್ಸ್): ಬ್ಯುಸಿನೆಸ್ ಅಡ್ಮಿನಿಸ್ಟ್ರೇಶನ್ ಆ್ಯಂಡ್ ಲೆಜಿಸ್ಲೇಟಿವ್ ಲಾ (5 ವರ್ಷ): ಪಿಯುಸಿ ಅನಂತರ ಐದು ವರ್ಷಗಳ ಸಮಗ್ರ ಪದವಿ

### ಸ್ಕೂಲ್ ಆಫ್ ಎಂಜಿನಿಯರಿಂಗ್

ಇಂದಿನ ತಾಂತ್ರಿಕ ಯುಗಕ್ಕೆ ತಕ್ಕಂತೆ ನಾಲ್ಕು ಪ್ರಮುಖ ಬಿಟೆಕ್ ವಿಭಾಗಗಳನ್ನು ಪರಿಚಯಿಸಲಾಗಿದೆ

- ಬಿ.ಟೆಕ್ ಕಂಪ್ಯೂಟರ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್
- ಬಿಟೆಕ್ ಕೃತಕ ಬುದ್ಧಿಮತ್ತೆ ಮತ್ತು ಮೆಷಿನ್ ಲರ್ನಿಂಗ್
- ಬಿಟೆಕ್ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್ ಎಂಜಿನಿಯರಿಂಗ್
- ಬಿಟೆಕ್ ಇನ್ಫಾರ್ಮೇಶನ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್

Udayavani 17-01-2026

**ಮಹಾನಗರ: ಸಂತ ಅಲೋಶಿಯಸ್ ವಿ.ವಿ.ಗೆ ಶುಕ್ರವಾರ ಭೇಟಿ ನೀಡಿದ ಸಂದರ್ಭ ರಾಜ್ಯಪಾಲ ಥಾವರಚಂದ್ ಗೆಹ್ಲೋತ್ ಅವರು ಐತಿಹಾಸಿಕ ಅಲೋಶಿಯಸ್ ಚಾಪೆಲ್‌ನ್ನು ವೀಕ್ಷಿಸಿದರು.**



Times of India 17-01-2026

# Law graduates must adhere to constitutional etiquette: Guv

Times News Network



Ravi Posavanike

**SPIRITUAL STOP:** Governor Thaawar Chand Gehlot visits St Aloysius Chapel in Mangaluru on Friday

**Mangaluru:** Karnataka governor Thaawar Chand Gehlot said that law graduates must inculcate social values and adhere to constitutional etiquette, while practising law, and called upon young engineering graduates to align with the objectives of the Viksit Bharat vision of the govt of India.

He was speaking after inaugurating the new School of Engineering and School of Law at St Aloysius (Deemed to be University) on Friday. He emphasised the need for engineering graduates to play a critical role in achieving national goals such as Digital India, Aatmanirbhar Bharat, Green Energy, and the startup ecosystem.

"Students should pair technical proficiency with ethical responsibility and environmental sensitivity. Engineers do not just build structures, but shape the future of the nation today. The School of Law is a vital step towards strengthening constitutional and democratic values. Law students should be committed to social justice, equality, and the protection of human rights," he said.

Referring to India's ancient academic glory, including Nalanda, Takshashila, and Vikramshila, he said that those were symbols of a time when India was a global "Vishwa Guru". Advocating for a synthesis of past and present, the governor called for the revival of Indian heritage by integrating modern skills with traditional values, thus echoing Swami Vivekananda's vision of education that develops both the mind and character.

Calling on students to make curiosity, hard work, and honesty their guiding principles, he said that their individual success contributes directly to the development of the nation.

Dakshina Kannada MP Capt Brijesh Chowta said that the Mangaluru region is an ocean of possibilities, with vast opportunities in education and commerce. Recalling his student days and active participation in NCC activities, he said that his college days helped shape his character and path to public service.

Engineering and law students should adopt the philosophy of Swami Vivekananda by dedicating themselves to a single transformative idea. More than 50% of the nation's startups originate from tier-2 and tier-3 towns. Local innovation is the key to national self-reliance, he said, and urged institutions to create a vigorous ecosystem of mentorship and skill development to ensure regional growth and prevent brain drain from the region.

St Aloysius University pro-chancellor Fr Melwin Pinto and vice-chancellor Fr Praveen Martis were present.

Prajavani 17-01-2026

## ಸೇಂಟ್ ಅಲೋಶಿಯಸ್ ವಿವಿಯ ಎಂಜಿನಿಯರಿಂಗ್, ಕಾನೂನು ಕೋರ್ಸ್ ಉದ್ಘಾಟನೆ

# ‘ವಿದ್ಯಾರ್ಥಿಗಳು ವಿಧೇಯತೆ ಮೈಗೂಡಿಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಿರುವ ಎಂಜಿನಿಯರಿಂಗ್ ಹಾಗೂ ಕಾನೂನು ಪದವಿ ಕೋರ್ಸ್‌ಗಳನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಶುಕ್ರವಾರ ಉದ್ಘಾಟಿಸಿದರು.

ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಶೈಕ್ಷಣಿಕ ಸಾಧನೆಯ ಜೊತೆಗೆ ಪರಿಶ್ರಮ, ಪ್ರಾಮಾಣಿಕತೆ, ವಿಧೇಯತೆ, ನೈತಿಕ ಹೊಣೆಗಾರಿಕೆ, ಸಾಮಾಜಿಕ ಜವಾಬ್ದಾರಿ, ಪರಿಸರ ರಕ್ಷಣೆ ಮೈಗೂಡಿಸಿಕೊಳ್ಳಬೇಕು. ಜ್ಞಾನದ ಹಂಬಲ ವಿದ್ಯಾರ್ಥಿಗಳಲ್ಲಿ ಇರಬೇಕು. ವಿದ್ಯಾರ್ಥಿ ದೆಸೆಯಲ್ಲಿ ಪಡೆದ ಜ್ಞಾನ ದೇಶದ ಶ್ರೇಯೋಭಿವೃದ್ಧಿಗೆ ವಿನಿಯೋಗವಾಗಬೇಕು ಎಂದರು.

ಹಿಂದೆ ನಲಂದಾ, ತಕ್ಷಶಿಲಾ ವಿಶ್ವವಿದ್ಯಾಲಯಗಳು ಜ್ಞಾನದ ದಾಹ ತಣಿಸುವ ಜೊತೆಗೆ ಭಾರತೀಯ ಸಂಸ್ಕೃತಿಯನ್ನು ಧಾರೆಯೆರೆಯುತ್ತಿದ್ದವು. ವಿದೇಶಿ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಇಲ್ಲಿಗೆ ಬರುತ್ತಿದ್ದರು. ಈ ಪರಂಪರೆಯ ಪುನರುತ್ಥಾನ ಆಗಬೇಕು. ಶಿಕ್ಷಣವು ಮಾನಸಿಕ ವಿಕಾಸ, ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕವಾದ ತಳಪಾಯ ಒದಗಿಸಬೇಕು ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರು. ಸೇಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆಯು ಇಂತಹ ಗುಣಮಟ್ಟದ ಶಿಕ್ಷಣ ನೀಡುತ್ತಿದೆ ಎಂದು ಶ್ಲಾಘಿಸಿದರು.

ಕಾನೂನು ಶಿಕ್ಷಣವು ಸಾಮಾಜಿಕ ನ್ಯಾಯ, ಸಮಾನತೆ, ಸಂವಿಧಾನ ರಕ್ಷಣೆ, ಮಾನವ ಹಕ್ಕು ರಕ್ಷಣೆಯನ್ನು ಪ್ರತಿಪಾದಿಸುತ್ತದೆ. ಕಾನೂನು ವಿದ್ಯಾರ್ಥಿಗಳು ಈ ಜ್ಞಾನವನ್ನು ಪಡೆದು ಸಂವಿಧಾನ ರಕ್ಷಕರಾಗುವ ಜೊತೆಗೆ, ಸಾಂವಿಧಾನಿಕ ಮೌಲ್ಯಕ್ಕೆ ಬದ್ಧರಾಗಿ ಇರಬೇಕು. ಪ್ರಧಾನಿಯವರ ಡಿಜಿಟಲ್ ಇಂಡಿಯಾ, ಆತ್ಮ ನಿರ್ಭರ ಭಾರತ, ಸ್ಟಾರ್ಟ್ ಅಪ್‌ಗಳ ಸ್ಥಾಪನೆಗೆ ಎಂಜಿನಿಯರಿಂಗ್ ಪದವೀಧರರು ಕೊಡುಗೆ ನೀಡಬೇಕು ಎಂದು ಹೇಳಿದರು.

ಶಿಕ್ಷಣ ಸಂಸ್ಥೆಯ ರೆಕ್ಟರ್ ಫಾ. ಮೆಲ್ವಿನ್ ಪಿಂಟೊ, ವಿವಿ ಕುಲಪತಿ ಫಾ. ಪ್ರವೀಣ್ ಮಾರ್ಟಿಸ್, ರಜಿಸ್ಟ್ರಾರ್ ರೊನಾಲ್ಡ್ ನಜರತ್, ಕಾನೂನು ಕಾಲೇಜಿನ ಡೀನ್ ಉದಯ್ ಕೃಷ್ಣ, ಎಂಜಿನಿಯರಿಂಗ್ ಕಾಲೇಜಿನ ಡೀನ್ ರುಬೇನ್ ಎಸ್ ಉಪಸ್ಥಿತರಿದ್ದರು.



ಮಂಗಳೂರಿನ ಸೇಂಟ್ ಆಲೋಶಿಯಸ್ ವಿವಿ ವರಣದಲ್ಲಿರುವ ಆಲೋಶಿಯಸ್ ಚಾಪಲ್‌ಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಭೇಟಿ ನೀಡಿದರು

ಪ್ರಜಾವಾಣಿ ಚಿತ್ರ

### ‘ಸಂಶೋಧನಾ ಕೇಂದ್ರ ಪ್ರಾರಂಭಿಸಿ’

ಶೈಕ್ಷಣಿಕ ಕ್ಷೇತ್ರದಲ್ಲಿ ಅಲೋಶಿಯಸ್ ಶಿಕ್ಷಣ ಸಂಸ್ಥೆಯ ಕೊಡುಗೆ ದೊಡ್ಡದು. ಸಮೃದ್ಧ ಸಂಪನ್ಮೂಲ ಹೊಂದಿರುವ ನಮ್ಮ ನಾಡು ಮಂಗಳೂರು 2.0ಕ್ಕೆ ಸಿದ್ಧವಾಗಬೇಕಾಗಿದೆ. ಅಲೋಶಿಯಸ್ ಶಿಕ್ಷಣ ಸಂಸ್ಥೆಯು ಸಂಶೋಧನೆ ಮತ್ತು ಅನ್ವೇಷಣಾ ಕೇಂದ್ರ ಪ್ರಾರಂಭಿಸುವ ನಿಟ್ಟಿನಲ್ಲಿ ಯೋಚಿಸಬೇಕು ಎಂದು ಮುಖ್ಯ ಅತಿಥಿಯಾಗಿದ್ದ ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದರು.

---

Varthabharathi 17-01-2026

# ವಿದ್ಯಾರ್ಥಿಗಳು ವಿಧೇಯತೆ ಮೈಗೂಡಿಸಿಕೊಳ್ಳಿ

## ರಾಜ್ಯಪಾಲ ಗೆಹ್ಲೋಟ್

## ಅಲೋಶಿಯಸ್ ವಿವಿಯ ಕಾನೂನು, ಇಂಜಿನಿಯರಿಂಗ್ ಕೋರ್ಸ್ ಉದ್ಘಾಟನೆ



ಮಂಗಳೂರು, ಜ.16: ವಿದ್ಯಾರ್ಥಿಗಳಲ್ಲಿ ಜ್ಞಾನದ ಹಂಬಲ ಇರಬೇಕು. ಶೈಕ್ಷಣಿಕ ಸಾಧನೆಯ ಜೊತೆಗೆ ವಿಧೇಯತೆಯನ್ನು ಮೈಗೂಡಿಸಿಕೊಳ್ಳಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಕರೆ ನೀಡಿದ್ದಾರೆ.

ನಗರದ ಸೈಂಟ್ ಅಲೋಶಿಯಸ್ ಪರಿಗಣಿತ ವಿವಿಯಲ್ಲಿ ಶುಕ್ರವಾರ ಇಂಜಿನಿಯರಿಂಗ್ ಹಾಗೂ ಕಾನೂನು ಪದವಿ ಕೋರ್ಸ್‌ಗಳಿಗೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಕಾನೂನು ಶಿಕ್ಷಣವು ಸಾಮಾಜಿಕ ನ್ಯಾಯ, ಸಂವಿಧಾನ ರಕ್ಷಣೆ, ಮಾನವ ಹಕ್ಕು ರಕ್ಷಣೆಯ ಬಗ್ಗೆ ಅರಿವು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕಾನೂನು ವಿದ್ಯಾರ್ಥಿಗಳು ಈ ಜ್ಞಾನವನ್ನು ಪಡೆದು ಸಂವಿಧಾನ ರಕ್ಷಕರಾಗಬೇಕು. ಪ್ರಧಾನಿಯವರ ಡಿಜಿಟಲ್ ಇಂಡಿಯಾ, ಆತ್ಮನಿರ್ಭರ ಭಾರತ, ಸ್ಟಾರ್ಟ್ ಅಪ್‌ಗಳ ಸ್ಥಾಪನೆಗೆ ಇಂಜಿನಿಯರಿಂಗ್ ಪದವೀಧರರು ಕೊಡುಗೆ ನೀಡಬೇಕು ಎಂದು ಹೇಳಿದರು.

ಹಿಂದೆ ನಲಂದಾ, ತಕ್ಷಶಿಲಾ ವಿವಿಗಳು ಜ್ಞಾನದ ದಾಹ ತಣಿಸುವ ಜೊತೆಗೆ ಭಾರತೀಯ ಸಂಸ್ಕೃತಿಯನ್ನು ಧಾರೆಯೆರೆಯುತ್ತಿದ್ದವು. ವಿದೇಶಿ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಇಲ್ಲಿಗೆ ಬರುತ್ತಿದ್ದರು. ಈ ಪರಂಪರೆಯ ಪುನರುತ್ಥಾನ ಆಗಬೇಕು ಎಂದು ಹೇಳಿದ ಅವರು, ಸೈಂಟ್ ಆಲೋಶಿಯಸ್ ಶಿಕ್ಷಣ ಸಂಸ್ಥೆಯು ಶೈಕ್ಷಣಿಕ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದು, ಗುಣಮಟ್ಟದ ಶಿಕ್ಷಣ ನೀಡುತ್ತಿದೆ ಎಂದು ಶ್ಲಾಘಿಸಿದರು.

ಸಂಸದ ಕ್ಯಾ. ಬ್ರಿಜೇಶ್ ಚೌಟ ಮಾತನಾಡಿ, ಶೈಕ್ಷಣಿಕ ಕ್ಷೇತ್ರದಲ್ಲಿ ಆಲೋಶಿಯಸ್ ಶಿಕ್ಷಣ ಸಂಸ್ಥೆಯ ಕೊಡುಗೆ ದೊಡ್ಡದು. ಮಂಗಳೂರು 2.0 ಬಗ್ಗೆ ಯೋಚಿಸಬೇಕಾಗಿದ್ದು, ಸ್ಥಳೀಯ ಅಭಿವೃದ್ಧಿ ಜೊತೆಗೆ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಸಿ, ಈ ನೆಲವನ್ನು ಇನ್ನಷ್ಟು ಸಮೃದ್ಧಗೊಳಿಸಬೇಕಾಗಿದೆ ಎಂದರು.

ಶಿಕ್ಷಣ ಸಂಸ್ಥೆಯ ರೆಕ್ಟರ್ ಫಾ.ಮೆಲ್ವಿನ್ ಪಿಂಟೊ, ವಿವಿಯ ಕುಲಪತಿ ಫಾ.ಪ್ರವೀಣ್ ಮಾರ್ಟಿಸ್, ರಿಜಿಸ್ಟ್ರಾರ್ ರೊನಾಲ್ಡ್ ನಝುರೆತ್, ಕಾನೂನು ಕಾಲೇಜಿನ ಡೀನ್ ಉದಯ್ ಕೃಷ್ಣ ಇಂಜಿನಿಯರಿಂಗ್ ಕಾಲೇಜಿನ ಡೀನ್ ರುಬೇನ್ ಎಸ್. ಉಪಸ್ಥಿತರಿದ್ದರು.

*Hosadigantha 17-01-2026*

# ಕಲಿಕೆ ಜತೆಗೆ ವಿಧೇಯತೆ ಮೈಗೂಡಿಸಿಕೊಳ್ಳಿ: ಗೆಹಲೋತ್

• **ಮಂಗಳೂರು:** ವಿದ್ಯಾರ್ಥಿಗಳು ಕಲಿಕೆಯೊಂದಿಗೆ ವಿಧೇಯತೆಯನ್ನು ಮೈಗೂಡಿಸಿಕೊಂಡಾಗ ಸುಂದರ ಬದುಕು ರೂಪುಗೊಳ್ಳಲು ಸಾಧ್ಯ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅಭಿಪ್ರಾಯಪಟ್ಟರು.

ಮಂಗಳೂರಿನ ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಇಂಜಿನಿಯರಿಂಗ್ ಹಾಗೂ ಕಾನೂನು ಪದವಿ ಕೋರ್ಸ್‌ಗಳಿಗೆ ಚಾಲನೆ ನೀಡಿ ಮಾತನಾಡಿದ



ಅವರು, ಶಿಕ್ಷಣ ಪಡೆದು ಹೊರಬರುವ ವಿದ್ಯಾರ್ಥಿಗಳು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಕಾನೂನು ಶಿಕ್ಷಣವು ಸಾಮಾಜಿಕ ನ್ಯಾಯ, ಸಂವಿಧಾನ ರಕ್ಷಣೆ, ಮಾನವ ಹಕ್ಕು ರಕ್ಷಣೆಯ ಬಗ್ಗೆ ಅರಿವು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಕಾನೂನು ವಿದ್ಯಾರ್ಥಿಗಳು ಈ ಜ್ಞಾನವನ್ನು ಪಡೆದು ಸಂವಿಧಾನ ರಕ್ಷಕರಾಗಬೇಕು ಎಂದು ಕರೆ ನೀಡಿದರು.

ದೇಶದ ಪ್ರಧಾನಿಯವರ ಕಲ್ಪನೆಯಂತೆ ಡಿಜಿಟಲ್ ಇಂಡಿಯಾ, ಆತ್ಮ ನಿರ್ಭರ ಭಾರತ, ಸ್ಟಾರ್ಟ್ ಅಪ್‌ಗಳ ಸ್ಥಾಪನೆಗೆ ಇಂಜಿನಿಯರಿಂಗ್ ಪದವೀಧರರು ಕೊಡುಗೆ ನೀಡಬೇಕು. ಹಿಂದೆ ನಲಂದಾ, ತಕ್ಷಶಿಲಾ ವಿಶ್ವವಿದ್ಯಾನಿಲಯಗಳು ಜ್ಞಾನದ ದಾಹ ತಣಿಸುವ ಜೊತೆಗೆ ಭಾರತೀಯ ಸಂಸ್ಕೃತಿಯನ್ನು ಧಾರೆಯೆರೆಯುತ್ತಿದ್ದವು. ವಿದೇಶಿ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಇಲ್ಲಿಗೆ ಬರುತ್ತಿದ್ದರು. ಈ ಪರಂಪರೆಯ ಪುನರುತ್ಥಾನ ಆಗಬೇಕು ಎಂದು ರಾಜ್ಯಪಾಲರು ಹೇಳಿದರು. ಸಂಸದ ಕ್ಯಾ. ಬ್ರಿಜೇಶ್ ಚೌಟ, ಅಲೋಶಿಯಸ್ ಶಿಕ್ಷಣ ಸಂಸ್ಥೆಯ ರೆಕ್ಟರ್ ಫಾ. ಮೆಲ್ವಿನ್ ಪಿಂಟೊ, ವಿವಿ ಕುಲಪತಿ ಫಾ. ಪ್ರವೀಣ್ ಮಾರ್ಟಿಸ್, ರಿಜಿಸ್ಟ್ರಾರ್ ರೊನಾಲ್ಡ್ ನಝರೆತ್, ಕಾನೂನು ಕಾಲೇಜಿನ ಡೀನ್ ಉದಯ್ ಕೃಷ್ಣ ಇಂಜಿನಿಯರಿಂಗ್ ಕಾಲೇಜಿನ ಡೀನ್ ರುಬೇನ್ ಎಸ್. ಉಪಸ್ಥಿತರಿದ್ದರು.

*Kannadaprabha 17-01-2026*

**ಶೈಕ್ಷಣಿಕ** ಅಲೋಶಿಯಸ್ ವಿವಿ ಕಾನೂನು, ಎಂಜಿನಿಯರಿಂಗ್ ಕೋರ್ಸ್ ಉದ್ಘಾಟನೆ

# ವಿದ್ಯಾರ್ಥಿಗಳು ವಿಧೇಯತೆ ಮೈಗೂಡಿಸಿಕೊಳ್ಳಿ: ಗೆಹಲೋತ್

• **ಕನ್ನಡಪ್ರಭ ವಾರ್ತೆ** ಮಂಗಳೂರು

ವಿದ್ಯಾರ್ಥಿಗಳಲ್ಲಿ ಜ್ಞಾನ ಹಂಬಲ, ಶೈಕ್ಷಣಿಕ ಸಾಧನೆ ಜತೆಗೆ ವಿಧೇಯತೆ ಮೈಗೂಡಿಸಿಕೊಳ್ಳಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಕರೆ ನೀಡಿದ್ದಾರೆ.

ನಗರದ ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಎಂಜಿನಿಯರಿಂಗ್ ಹಾಗೂ ಕಾನೂನು ಪದವಿ ಕೋರ್ಸ್‌ಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಸಾಮಾಜಿಕ ನ್ಯಾಯ, ಸಂವಿಧಾನ ರಕ್ಷಣೆ, ಮಾನವ ಹಕ್ಕು ರಕ್ಷಣೆಯ ಬಗ್ಗೆ ಅರಿವು ಮೂಡಿಸುವಲ್ಲಿ ಕಾನೂನು ಶಿಕ್ಷಣ ಮಹತ್ವದ ಪಾತ್ರ ವಹಿಸುತ್ತದೆ. ಕಾನೂನು ವಿದ್ಯಾರ್ಥಿಗಳು ಈ ಜ್ಞಾನವನ್ನು ಪಡೆದು ಸಂವಿಧಾನ ರಕ್ಷಕರಾಗಬೇಕು. ಪ್ರಧಾನಿಯವರ ಡಿಜಿಟಲ್ ಇಂಡಿಯಾ, ಆತ್ಮ ನಿರ್ಭರ ಭಾರತ, ಸ್ಟಾರ್ಟ್‌ಅಪ್‌ಗಳ ಸ್ಥಾಪನೆಗೆ ಎಂಜಿನಿಯರಿಂಗ್ ಪದವೀಧರರು ಕೊಡುಗೆ ನೀಡಬೇಕು ಎಂದು ಹೇಳಿದರು.




ಅಲೋಶಿಯಸ್ ಪರಿಗಣಿತ ವಿವಿಯಲ್ಲಿ ಎಂಜಿನಿಯರಿಂಗ್, ಕಾನೂನು ಪದವಿ ಕೋರ್ಸ್‌ಗೆ ಚಾಲನೆ ನೀಡಿದ ರಾಜ್ಯಪಾಲರು.

ಹಿಂದೆ ನಲಂದಾ, ತಕ್ಷಶಿಲಾ ವಿಶ್ವವಿದ್ಯಾಲಯಗಳು ಜ್ಞಾನದ ದಾಹ ತಣಿಸುವ ಜೊತೆಗೆ ಭಾರತೀಯ ಸಂಸ್ಕೃತಿಯನ್ನು ಧಾರೆಯೆರೆಯುತ್ತಿದ್ದವು. ವಿದೇಶಿ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಇಲ್ಲಿಗೆ ಬರುತ್ತಿದ್ದರು. ಈ ಪರಂಪರೆಯ ಪುನರುತ್ಥಾನ ಆಗಬೇಕು ಎಂದು ಹೇಳಿದ ಅವರು, ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆ ಶೈಕ್ಷಣಿಕ

- ದ.ಕ. ಸಂಸದ ಕ್ಯಾ.. ಬ್ರಿಜೇಶ್ ಚೌಟ ಮಾತನಾಡಿ, ಶೈಕ್ಷಣಿಕ ಕ್ಷೇತ್ರದಲ್ಲಿ ಅಲೋಶಿಯಸ್ ಶಿಕ್ಷಣ ಸಂಸ್ಥೆಯ ಕೊಡುಗೆ ದೊಡ್ಡದು. ಮಂಗಳೂರು 2.0 ಬಗ್ಗೆ ಯೋಚಿಸಬೇಕಾಗಿದ್ದು, ಸ್ಥಳೀಯ ಅಭಿವೃದ್ಧಿ ಜೊತೆಗೆ ಸ್ಥಳೀಯ ಉದ್ಯೋಗ ಸೃಷ್ಟಿಸಿ, ನೆಲ ಇನ್ನಷ್ಟು ಸಮೃದ್ಧಗೊಳಿಸಬೇಕು ಎಂದರು.

ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದು, ಗುಣಮಟ್ಟದ ಶಿಕ್ಷಣ ನೀಡುತ್ತಿದೆ ಎಂದು ಶ್ಲಾಘಿಸಿದರು.

ಶಿಕ್ಷಣ ಸಂಸ್ಥೆಯ ರೆಕ್ಟರ್ ಫಾ. ಮೆಲ್ವಿನ್ ಪಿಂಟೊ, ವಿವಿ ಕುಲಪತಿ ಫಾ. ಪ್ರವೀಣ್ ಮಾರ್ಟಿಸ್, ರಿಜಿಸ್ಟ್ರಾರ್ ರೊನಾಲ್ಡ್ ನಝರತ್, ಕಾನೂನು ಕಾಲೇಜಿನ ಡೀನ್ ಉದಯಕೃಷ್ಣ, ಎಂಜಿನಿಯರಿಂಗ್ ಕಾಲೇಜಿನ ಡೀನ್ ರುಬೇನ್ ಎಸ್. ಇದ್ದರು.

*The Hindu 18-01-2026*

# Need more socially responsive engineers, lawyers, says Governor

**The Hindu Bureau**
MANGALURU

Expressing the need for more number of socially responsive engineers and lawyers for furthering the country's development, Governor Thaawarchand Gehlot lauded St. Aloysius Deemed-to-be-University for widening its service in the education sector by opening separate institutes for engineering and law.

Formally inaugurating St. Aloysius Deemed-to-be-University's School of Engineering and School of Law in Mangaluru on Friday, the Governor said there is a need for more socially committed engineers with human values in order to aid the growth of the nation.

"Young lawyers should protect human rights, inculcate Constitutional values and be committed to social justice. There is great hope from St. Aloysius that those passing out from these two new institutions will have these qualities," he said.

Capt. Brijesh Chowta, Dakshina Kannada MP, called upon St. Aloysius and other educational institutions of the region to showcase the capacity of Dakshina Kannada youth. "We should build locally and sell globally," he said.

St. Aloyisus Deemed-to-be-University Pro-Chancellor Melwin J. Pinto and Vice-Chancellor Praveen Martis, also spoke.

The Governor spent some time at the old St. Aloysius Chapel before leaving the venue.

*Rajasthan Patrika 17-01-2026*

# शिक्षा का उद्देश्य केवल व्यक्तिगत सफलता तक सीमित नहीं

**पत्रिका न्यूज नेटवर्क**
patrika.com

**बेंगलूरु.** शिक्षा का उद्देश्य केवल व्यक्तिगत सफलता तक सीमित नहीं होना चाहिए, बल्कि समाज और राष्ट्र की प्रगति में भी सक्रिय योगदान देना चाहिए। यह बातें राज्यपाल थावरचंद गहलोत ने शुक्रवार को मेंगलूरु स्थित सेंट एलॉयसियस (डीम्ड टू बी यूनिवर्सिटी) में स्कूल ऑफ इंजीनियरिंग और स्कूल ऑफ लॉ का उद्घाटन करते हुए कही। इस अवसर पर उन्होंने छात्रों से जिज्ञासा, परिश्रम और ईमानदारी को जीवन का मूल मंत्र बनाने का आह्वान किया। उन्होंने स्वामी विवेकानंद के विचारों का उल्लेख करते हुए कहा कि सच्ची शिक्षा वही है जो व्यक्तित्व का निर्माण करे, मन मजबूत बनाए, बुद्धि विकास करे और आत्मनिर्भर बनाए। भारत प्राचीन काल में विश्वगुरु के रूप में जाना जाता था, जहां नालंदा, तक्षशिला और विक्रमशिला जैसे विश्वविख्यात शिक्षा केंद्र मौजूद थे। भारत को फिर से वैश्विक ज्ञान शक्ति बनाने के लिए युवाओं की प्रतिभा, कौशल और ऊर्जा का सही दिशा में उपयोग जरूरी है।



कार्यक्रम में प्रतिभागी को सम्मानित करते राज्यपाल व अन्य अतिथि।

## ...बढ़ती है नवाचार क्षमता

**इंजीनियरिंग शिक्षा** पर बोलते हुए राज्यपाल ने कहा कि यह केवल तकनीकी ज्ञान तक सीमित नहीं है, बल्कि नवाचार, समस्या समाधान और रचनात्मक सोच को भी बढ़ावा देती है। वहीं, स्कूल ऑफ लॉ को उन्होंने संविधान, न्याय और लोकतांत्रिक मूल्यों को मजबूत करने की दिशा में एक महत्वपूर्ण पहल बताया। कार्यक्रम में सांसद कैप्टन ब्रिजेश चौटा, विवि के प्रो-चांसलर फादर मेल्विन पिंटो, कुलपति डॉ. प्रवीण मार्टिस, कुलसचिव डॉ. रोनाल्ड एन. आदि उपस्थित रहे।

*Udayavani 22-01-2026*




**ಮಹಾನಗರ:** ಭರತನಾಟ್ಯದಲ್ಲಿ ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆ ಮಾಡಿದ ರೆಮೋನಾ ಇವೆಟ್ ಪಿರೇರಾ ಅವರನ್ನು ಸಂತ ಅಲೋಶಿಯಸ್ ವಿಶ್ವ ವಿದ್ಯಾನಿಲಯದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಗೌರವಿಸಿದರು. ಸಂಸದ ಕ್ಯಾ| ಬ್ರಿಜೇಶ್ ಚೌಟ, ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ರೆಕ್ಟರ್ ವಂ| ಮೆಲ್ವಿನ್ ಜೆ. ಪಿಂಟೋ, ವಿ.ವಿ. ಕುಲಪತಿ ವಂ| ಡಾ| ಪ್ರವೀಣ್ ಮಾರ್ಟಿಸ್, ರಿಜಿಸ್ಟ್ರಾರ್ ಡಾ| ರೊನಾಲ್ಡ್ ನಜರೆತ್, ಕಾನೂನು ಸ್ಕೂಲ್‌ನ ಡೀನ್ ಉದಯಕೃಷ್ಣ, ಎಂಜಿನಿಯರಿಂಗ್ ಸ್ಕೂಲ್‌ನ ಡೀನ್ ರುಬೇನ್ ಎಸ್. ಮೊದಲಾದವರು ಉಪಸ್ಥಿತರಿದ್ದರು.

## Digital News Links

1. Mangaluru: Governor of Karnataka to visit St Aloysius (Deemed to be University) on Jan 16
https://www.daijiworld.com/news/newsDisplay?newsID=1303526
2. Mangaluru: Governor inaugurates new Schools of Engineering and Law at St Aloysius University
https://www.daijiworld.com/news/newsDisplay?newsID=1303822
3. ಮಂಗಳೂರು: ಸಮಾಜದ ಬೆಳವಣಿಗೆಯಲ್ಲಿ ಶಿಕ್ಷಣದ ಪಾತ್ರ ಮಹತ್ವವಾಗಿದ್ದು: ಥಾವರ್ ಚಂದ್ ಗೆಹ್ಲೋಟ್ | St Aloysius College
https://www.youtube.com/watch?v=VMVQa5S3xsA
4. Inauguration of the School of Engineering & the School of Law by the hon'ble Governor of Karnataka
https://www.youtube.com/watch?v=MBg3DFTp7XI
5. ಮಂಗಳೂರಿನಲ್ಲಿ ಸ್ಕೂಲ್ ಆಫ್ ಇಂಜಿನಿಯರಿಂಗ್ ಮತ್ತು ಕಾನೂನು ಶಾಲೆಗೆ ರಾಜ್ಯಪಾಲ ಗೆಹ್ಲೋಟ್ ಚಾಲನೆ
https://reporterkarnataka.com/governor-gehlot-inaugurates-school-of-engineering-and-law-school-in-mangalore/#google_vignette
6. St Aloysius College - Autonomous || Inauguration of the School of Engineering and the School of Law
https://www.youtube.com/watch?v=rSpqS1WWUL4